ಅನೇಕ ಕಾಲ ತಪಸ್ಸುಗೈದ ಋಷಿಗಳೂ ಸಹ ಇದರಲ್ಲಿ ಸೋತುಹೋಗಿರುವುದನ್ನು ನಾವು ಕಾಣುತ್ತೇವೆ. ಸಾವಿರಾರು ವರ್ಷ ತಪಸ್ಸು ಮಾಡುತ್ತಾ ನಿರ್ಜನ ಪ್ರದೇಶದಲ್ಲಿ ಕುಳಿತಿದ್ದ ವಿಶ್ವಾಮಿತ್ರನು ಮೇನಕೆಯ ದರ್ಶನ ಮಾತ್ರದಿಂದ ಕಾಮಕ್ಕೆ ವಶನಾಗಿ ಸೋತು ಜಾರಿಹೋದನು. ಹೆಮ್ಮಾರಿಯಾದ ಆ ಮಾಯೆಯ ಬಾಯಿಯಲ್ಲಿ **ಹೆಣ್ಣು, ಹೊನ್ನು, ಅಹಂ–ಮಮ ಕಾರದ ಭಾವಗಳು** ಎಂಬ ಮೂರು ಘಟಗಳು ಇವೆ.

ಕೇವಲ ಹೆಣ್ಣು ಮಾತ್ರ ಮಾಯೆಯ ಮಾಟದಲ್ಲಿ ಆಕರ್ಷಣೆಯ ಗುರಿಯಿಲ್ಲ. ಗಂಡಿಗೆ ಹೆಣ್ಣು ಹೇಗೋ ಹಾಗೆ, ಹೆಣ್ಣಿಗೆ ಗಂಡು ಕೂಡ ಮಾಯೆಯೇ. 'ಹೆಣ್ಣಿಗೆ ಗಂಡಾಗಿ ಕಾಡಿತ್ತು ಮಾಯೆ' ಎಂಬ ಮಹಾದೇವಿಯಕ್ಕನ ಮಾತನ್ನು ನಾವು ಇಲ್ಲಿ ನೆನೆಯಬಹುದು. ಇಲ್ಲಿ ಮನುಷ್ಯ ಕಾಮವಶವಾಗುವನು. ಇದು ಮಾಯೆಯೆಂಬ ಹೆಮ್ಮಾರಿಯ ಬಾಯೊಳಗಣ ಒಂದು ಘಟ. ಎರಡನೆಯದು ಹೊನ್ನು. ಧನದಾಸೆಯ ಸೆಳೆತಕ್ಕೆ ಸಿಲುಕಿದ ಮಾನವ ಅದನ್ನು ಗಳಿಸುವ ಉದ್ದೇಶದಿಂದ ಅನ್ಯಾಯದ ಮಾರ್ಗವನ್ನು ಹಿಡಿಯಬಹುದು. ಒಂದು ಪಕ್ಷ ನ್ಯಾಯವಾಗಿಯೇ ಗಳಿಸಿದ್ದರೂ ಧನದ ಮೇಲಿನ ಲೋಭದಿಂದ ಜಿಪುಣನಂತೆ ವರ್ತಿಸಿ ಅದನ್ನು ಸತ್ಪಾತ್ರರಿಗೆ ಕೊಡಲು ಕೂಡ ಹಿಂಜರಿಯುತ್ತಾನೆ. ಅದನ್ನು ಹಾಗೆಯೇ ಸಂಗ್ರಹಿಸಿಟ್ಟು ಕೊಳ್ಳಬೇಕೆಂಬ ಭಾವ ಹುಟ್ಟಿ ಲೋಭಿಯಾಗುತ್ತಾನೆ. ಹೀಗೆ ಲೋಭವೆಂಬುದು ಮಾಯೆಯ ಬಾಯೊಳಗಣ ಎರಡನೇ ಘಟ ಎನ್ನುತ್ತಾರೆ ಅಲ್ಲಮಪ್ರಭುದೇವರು. ಮೂರನೆಯದು ಅಧಿಕಾರ ಕೀರ್ತಿಗಳನ್ನು ಪಡೆಯಬೇಕೆಂಬ 'ಅಹಂ'ಭಾವ. ಇವುಗಳನ್ನು ಪಡೆಯುವ ದಿಶೆಯಲ್ಲಿ ಮನುಷ್ಯ ಹೆಣಗಾಡುತ್ತಾನೆ. ಮುಂದೆ ಅವನ್ನು ಪಡೆದು ಮತ್ತಷ್ಟು ಅಹಂಕಾರ ತಾಳುತ್ತಾನೆ.

ಈ ಮೂರು ಘಟಗಳು ಹೆಮ್ಮಾರಿಯಂತಿರುವ ಮಾಯೆಯ ಆಕರ್ಷಣೆಯ ರೂಪದಲ್ಲಿ ಸಾಧಕನ ಮನಸ್ಸನ್ನು ತುಂಬಿಕೊಂಡು ಆತನನ್ನು ನಿರ್ಬಂಧಿಸಿ, ಭಗವಂತನೆಡೆಗೆ ನಡೆಯುವ ಮಾರ್ಗ ದಲ್ಲಿ ಅಡ್ಡಿಪಡಿಸುತ್ತವೆ. ಈ ಕ್ಷುಲ್ಲಕ ಆಕರ್ಷಣೆಗಳಿಂದ ಬಿಡುಗಡೆ ಹೊಂದದ ಹೊರತು ಸಾಧಕ ಅಧ್ಯಾತ್ಮಮಾರ್ಗದಲ್ಲಿ ಮುಂದೆ ಸಾಗಲಾರ. ಏಕೆಂದರೆ ಆ ಮಾಯೆಯ ಬಾಯೊಳಗೆ **'ನಂಜಿನ ಸೊನೆ ಸುರಿವುತ್ತಿಪ್ಪದು'** – ನಂಜಿನ ಸೊನೆ ಎಂದರೆ ವಿಷದ ರಸ, ಅದೇ ಪ್ರಾಪಂಚಿಕ ವಿಷಯರಸ. ವಿಷಯಸುಖಗಳನ್ನು ಅನುಭವಿಸುತ್ತಾ, ಅದೇ ಸುಖ ಎಂಬ ಭ್ರಮೆಯಲ್ಲಿ ಮನುಷ್ಯ ಬದುಕುತ್ತಾನೆ. ವಿಷಯ ರಸದ ನಂಜಿನ ಸೊನೆಯನ್ನು 'ಅಮೃತಸೇವನೆ' ಎಂಬ ಭ್ರಾಂತಿಯಲ್ಲಿ ಹೀರುತ್ತಲೇ ಸಾಗುವ ಸಾಧಕನನ್ನು ತನ್ನ ವಶಕ್ಕೆ ಒಳಪಡಿಸುತ್ತಾಳೆ, ಮಾಯೆಯೆಂಬ ರಕ್ಕಸಿ. ಹೀಗೆ ಜೀವರಿಗೆ ಆಮಿಷವೊಡ್ಡುತ್ತಾ, ಅವರು ಅಧ್ಯಾತ್ಮ ಮಾರ್ಗದಲ್ಲಿ ಮುಂದುವರಿಯದಂತೆ ಅಡ್ಡಿಪಡಿಸುವುದಕ್ಕಾಗಿ, ಅಶಕ್ತ ಮನಸ್ಸಿನಲ್ಲಿ ಮನೆಮಾಡಿಕೊಂಡು ನೆಲೆಸಿರುವ ಮಾಯೆಯೆಂಬ ಹೆಮ್ಮಾರಿಯು ಕಾಮ, ಲೋಭ ಮತ್ತು ಅಹಂಗಳಿಗೆ ಪ್ರೇರಕಳಾಗಿ, ದೈವೀಭಾವವು ಮನದಲ್ಲಿ ನೆಲೆಸಲು ಅವಕಾಶವೀಯದಂತೆ ಆಕ್ರಮಿಸಿಕೊಂಡಿದ್ದಾಳೆ.

ಸಾಧಕನ ಹಾದಿಯಲ್ಲಿ ಅಡೆತಡೆ ಉಂಟುಮಾಡುವ ಇನ್ನೂ ಒಂದೆರಡು ಮಾತುಗಳನ್ನು ಪ್ರಭುದೇವರು ಮುಂದಿನ ಸಾಲಿನಲ್ಲಿ ಹೇಳಿದ್ದಾರೆ: **ಕಾಡಕೋಣನ ಮುಖದಲ್ಲಿ ಕತ್ತಲೆ ಕಾಣಲೀಸದು.** **ಕಾಡುಕೋಣ** ಎಂದರೆ ಸೊಕ್ಕಿದ ಮದ, ಕತ್ತಲೆ, ಅಜ್ಞಾನ. ಅದು **ಕಾಣಲೀಸದು** – ತೋರಗೊಡದು. ತನ್ನಲ್ಲಿರುವ ಐಶ್ವರ್ಯ, ಅಂತಸ್ತು, ಅಧಿಕಾರಗಳಂತಹ ಜಡವಸ್ತುಗಳ ಗರ್ವದಿಂದ ಮನುಷ್ಯನಿಗೆ ಮದ ಏರುತ್ತದೆ. ಅಂತಹ ಅವಸ್ಥೆಯಲ್ಲಿ ಅಜ್ಞಾನದ ಅಂಧಕಾರ ಅವನನ್ನು ಕವಿದುಕೊಂಡು ಶಿವಬೆಳಗನ್ನು ಕಾಣಲು ಅಥವಾ ಕಾಣಬೇಕೆಂಬ ಬಯಕೆ ಹೊಂದಲು ಕೂಡ ಸಾಧ್ಯವಾಗದು.

**ಐವಾಯಿ ಹುಲಿ ಆಗುಳಿಸುತ್ತಿಪ್ಪುದು** – ಹುಲಿ ಎಂದರೆ ಇದು ಸಾಮಾನ್ಯವಾದ ಹುಲಿಯಲ್ಲ. ಇದು ಐದು ಬಾಯಿಗಳುಳ್ಳ ಹುಲಿ. ಇದು ಕಾಲದ ಸಂಕೇತ. ಕಾಲನು ಮನುಷ್ಯನನ್ನು ಐದು ರೀತಿಯ ವಿಕಾರಗಳಿಗೆ ಒಳಪಡಿಸುತ್ತಾನೆ. ಜಗತ್ತಿನಲ್ಲಿ ಸೃಷ್ಟಿಯಾಗಿರುವ ಪ್ರತಿಯೊಂದು ವಸ್ತುವೂ ಕಾಲದ ಹೊಡೆತಕ್ಕೆ ಈಡಾಗಿ ತಮ್ಮ ತಮ್ಮ ಪೂರ್ವಸ್ಥಿತಿಯನ್ನು ಕಳೆದುಕೊಂಡು ಬದಲಾವಣೆ ಹೊಂದುತ್ತಾ ಕೊನೆಗೊಮ್ಮೆ ನಾಶವಾಗುವುವು. ಇದು ಸೃಷ್ಟಿಯ ಸಹಜ ಸ್ವಭಾವ. ಇದೇ ರೀತಿ ಮನುಷ್ಯನಲ್ಲಿ ಐದು ವಿಕಾರಗಳು ಉಂಟಾಗುತ್ತವೆ. ಅವು ಯಾವುವೆಂದರೆ **ಜನನ, ಪರಿಣಾಮ, ವರ್ಧನ, ಕ್ಷೀಣನ** ಮತ್ತು **ಮೃತ್ಯು.** ಮೊದಲು ದೇಹ ಹುಟ್ಟುತ್ತದೆ. ಅನಂತರ ಹೊರಗಿನ ಪಂಚಭೂತಗಳಿಗೆ, ನೋವು ನಲಿವು ಸುಖ ದುಃಖಗಳಿಗೆ ಸ್ಪಂದಿಸುತ್ತದೆ. ಹಾಗೆಯೇ ಶೈಶವಾವಸ್ಥೆ, ಬಾಲ್ಯಾವಸ್ಥೆ, ಯೌವನಾ ವಸ್ಥೆ ಮತ್ತು ಪ್ರೌಢಾವಸ್ಥೆ. ಕಾಲ ಕಳೆದಂತೆಲ್ಲಾ ಮುಪ್ಪು ಆವರಿಸಿ ದೇಹ ಜರ್ಝರಿತಗೊಂಡು, **'ನೆರೆ ಕೆನ್ನೆಗೆ, ತೆರೆ ಗಲ್ಲಕೆ'** ಎಂಬ ಸ್ಥಿತಿ ಬಂದುಬಿಡುತ್ತದೆ. ನಡೆದಾಡುವ ಶಕ್ತಿಗುಂದಿ ಕೈಗೆ ಕೋಲು ಬರುತ್ತದೆ. ದೇಹದ ಇಂದ್ರಿಯಗಳೆಲ್ಲಾ ಕ್ಷೀಣಿಸಿ ದೇಹಕ್ಕೆ ಮುಪ್ಪಿನ ವಿಕಾರಗಳನ್ನುಂಟುಮಾಡುವ ಕಾಲನೆಂಬ (ಮರಣ) ವ್ಯಾಘ್ರ ಮಾನವನ ದೇಹ ಜೀವಗಳನ್ನು ನುಂಗಿ ಹಾಕಲು 'ಆ' ಎಂದು ಬಾಯ್ತೆರೆದುಕೊಂಡೇ ಇರುತ್ತದೆ. ಇದು ಜಗದ ಅಸ್ತಿತ್ವ ಇರುವವರೆಗೂ ನಡೆಯುತ್ತಲೇ ಇರುವ ಸತತ ಕ್ರಿಯೆ. ಇದನ್ನು ಅರಿತುಕೊಂಡು ಸಾಧಕ ಇವಾವುದಕ್ಕೂ ವಶನಾಗದಂತೆ ದೃಢಮನಸ್ಕನಾಗಿರಬೇಕು. ಮೇಲೆ ತಿಳಿಸಿರುವ ಎಲ್ಲಾ ಭಾವಗಳನ್ನೂ ಮೀರಿಹೋಗಿ ಸಾಧನೆಯೆಡೆಗೆ ತನ್ನ ಸಂಪೂರ್ಣ ಗಮನವನ್ನು ಇರಿಸಬೇಕು. ಆಗ ಮಾನವನು ವಿಷಯ ಪ್ರಪಂಚದ ನಡುವೆಯೇ ಇದ್ದರೂ ಮಾಯೆಯೆಂಬ ಹೆಮ್ಮಾರಿಯ ಬಾಯಹೊಗದೆ, ಆಕೆ ಗಾಸಿಪಡಿಸುವ ಕಾಮ, ಲೋಭ ಮತ್ತು ಅಹಂಕಾರಗಳಿಗೆ ಈಡಾಗದೆ ಸಾಧನಾಮಾರ್ಗ ದಲ್ಲಿ ಮುನ್ನಡೆಯಲು ಸಾಧ್ಯ. ಹೀಗೆ ಸಾಧನೆಗೈದು ಯಾವುದಕ್ಕೂ ಅಂಟಿಕೊಳ್ಳದೆ, ನಿರಾತಂಕವಾಗಿ, ನಿರ್ಭೀತಿಯಿಂದ ಎಲ್ಲವನ್ನೂ ಗೆದ್ದು ತನ್ನೆಡೆಗೆ ಸಾಗಿಬರುವ ಭಕ್ತನನ್ನು ಸಂತಸದಿಂದ ಸ್ವೀಕರಿ ಸುತ್ತಾನೆ **'ಗುಹೇಶ್ವರ'** ಎಂಬುದು ಈ ವಚನದ ಭಾವ.